
# ಜಿ.ಪಿ. ರಾಜರತ್ನಂ



'ರಾಜರತ್ನಂ ಅವರ ಒಂದು ಪುಸ್ತಕ ಪತ್ರವಾಗಿದೆ. ಅದನ್ನು ನೀವು ಮುದ್ರಣ ಮಾಡಬೇಕು. ಇನ್ನು ಎರಡು ದಿನಗಳಲ್ಲಿ ನಾನೇ ಬರುತ್ತೇನೆ. ಕಾಗದ ಇತ್ಯಾದಿಗಳಿಗೆ ವ್ಯವಸ್ಥೆ ಮಾಡುತ್ತೇನೆ...' ಎಂದು ಮೈಸೂರಿನ ಒಬ್ಬ ಪ್ರಕಾಶಕರಿಂದ ಕಾಗದ ಬಂತು.

ಕಾಗದ ಬಂದ ಮಾರನೆಯ ದಿನ, ಮಧ್ಯಾಹ್ನ ನಾನು ಪ್ರೆಸ್ಸಿನಲ್ಲಿ ಇರಲಿಲ್ಲ. ಎಲ್ಲಿಗೋ ಹೋಗಿದ್ದವನು ಹಿಂದಿರುಗಿ ಬಂದರೆ, ರಾಜರತ್ನಂ ನನ್ನ ಎದುರಿನ ಕುರ್ಚಿಯಲ್ಲಿ ಬಂದು ಕುಳಿತುಬಿಟ್ಟಿದ್ದಾರೆ.

'ನಮಸ್ಕಾರ ಸಾರ್, ಮೈಸೂರಿಂದ ಕಾಗದ ಬಂದಿದೆ.'

'ಅದಕ್ಕೇ ಬಂದೆ!'

'ಸರಿ, ಅವರು ಬರಲಿ, ಮುದ್ರಣಕ್ಕೆ ತೆಗದುಕೊಳ್ಳುತ್ತೇನೆ.'

'ಕಾಲಕ್ಕೆ ಸರಿಯಾಗಿ ನೀವು ಮಾಡಿ ಮುಗಿಸಬೇಕು. ಅದು ಇದು ಕಾರಣ ಹೇಳಿ ವಿಳಂಬ ಮಾಡಬಾರದು.'

'ಇಲ್ಲ, ಒಪ್ಪಿಕೊಂಡ ಕೆಲಸ ಆ ಸಮಯಕ್ಕೆ ಸರಿಯಾಗಿ ನಾನು ಮುಗಿಸಿಯೇ ಮುಗಿಸುತ್ತೇನೆ.'

'ಸರಿ, ಪ್ರೂಫ್ ನಾನು ನೋಡಲೇಬೇಕು. ನೀವು ಕಳಿಸಬೇಕಾಗಿಲ್ಲ. ಸುಮ್ಮನೆ ವಿಳಂಬ ಆಗುತ್ತೆ. ಇಂಥ ಸಮಯಕ್ಕೆ ಬಾ ಎಂದರೆ ನಾನೇ ಬರ್‍ತೀನಿ.'

'ಆಯ್ತು, ಸಾರ್.'

ರಾಜರತ್ನಂ ಹೊರಟು ಹೋದರು. ಆಮೇಲೆ ಆ ಕೃತಿ ನಮ್ಮಲ್ಲಿ ಅಚ್ಚಾಗಲಿಲ್ಲ. ಆ ಪ್ರಕಾಶಕರೂ ಬರಲಿಲ್ಲ. ಏನು ಕಾರಣವೊ ನನಗೆ ತಿಳಿಯಲಿಲ್ಲ.

ಆ ಬಳಿಕ ಒಂದೆರಡು ಸಣ್ಣ ಪುಸ್ತಕಗಳನ್ನು ರಾಜರತ್ನಂ ನಮ್ಮಲ್ಲಿ ಮುದ್ರಣ ಮಾಡಿಸಿದರು.

ಒಂದು ಸಲ ನಾಲ್ಕೇ ನಾಲ್ಕು ಪುಟಗಳು ಅದರಲ್ಲಿನ ಕೆಲವು ಅಚ್ಚಿನ ಮೊಳೆಗಳು ಎಂದರೆ ಅಕ್ಷರಗಳು ನಮಗೆ ಬೇಕೇ ಬೇಕಾಯಿತು, ಬೇರೊಂದು ಕೆಲಸಕ್ಕಾಗಿ. ಮುದ್ರಣದ ಆ ಕೆಲಸ ಆಗಲೇ ಮುಗಿಯಬೇಕಿತ್ತು.

ದೊಡ್ಡ ಪ್ರೆಸ್‌ಗಳಾದರೆ ಪರವಾಗಿಲ್ಲ, ಹಲವು ಕೇಸುಗಳಲ್ಲಿ ಅಚ್ಚಿನ ಮೊಳೆಗಳು ತುಂಬಿಕೊಂಡಿರುತ್ತವೆ. ಸಣ್ಣ ಪ್ರೆಸ್‌ಗಳಲ್ಲಿ ಫಜೀತಿ. ಇದರಿಂದ ಅದಕ್ಕೆ ಅದರಿಂದ ಇದಕ್ಕೆ ಕಿತ್ತು ಮುಗಿಸಬೇಕು. ಕಾಳಿ ಕಿತ್ತು ಬೋಳಿ, ಬೋಳಿ ಕಿತ್ತು ಕಾಳಿ ಮಾಡಲೇಬೇಕು.

ರಾಜರತ್ನಂ ಅವರ ಸ್ವಭಾವ ತಿಳಿದಿದ್ದರೂ, ಯಾವುದೋ ಬೇರೆ ಕೆಲಸ ತುರ್ತಾಗಿ ಆಗಬೇಕಾಗಿದ್ದು ಅಚ್ಚಿನ ಮೊಳೆಗಳು ಬೇಕೇ ಬೇಕಾಗಿದ್ದುದರಿಂದ ಆ ನಾಲ್ಕು ಪುಟಗಳನ್ನು